ಇಲಾಖೆ / ವಿಷಯ: DEPARTMENT / SUBJECT: ವಿಧಾನ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ    ದಿನಾಂಕ : DATE : 04/06/2019

# ಸ್ಪೀಕರ್ ಕಚೇರಿಗೆ ಸಿಎಂ ಎಚ್‌ಡಿಕೆ ದಿಢೀರ್ ಭೇಟಿ

ಕ.ಪ್ರ. 4/6/19

**ಬೆಂಗಳೂರು:** ನಾನು ಪ್ರತಿನಿಧಿಸುವ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ನನ್ನ ಮನವಿ ಮೇರೆಗೆ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಬಂದು ನನ್ನ ಬಳಿ ಚರ್ಚೆ ನಡೆಸಿದ್ದಾರೆ. ಕ್ಷೇತ್ರದ ಕೆಲಸಗಳ ಹೊರತಾಗಿ ಬೇರೇನೂ ಚರ್ಚೆ ಆಗಿಲ್ಲ ಎಂದು ವಿಧಾನಸಭೆ ಅಧ್ಯಕ್ಷ ರಮೇಶ್‌ಕುಮಾರ್ ಹೇಳಿದ್ದಾರೆ.

ಸೋಮವಾರ ಸಂಜೆ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಸ್ಪೀಕರ್ ರಮೇಶ್ ಕುಮಾರ್ ಅವರ ಕಚೇರಿಗೆ ಭೇಟಿ ನೀಡಿ ಮಾತುಕತೆ ನಡೆಸಿದರು.

ಬಳಿಕ ಮಾತನಾಡಿದ ರಮೇಶ್‌ಕುಮಾರ್ ಅವರು, ಸಿಎಂ ಬಳಿ ನನ್ನ ಕ್ಷೇತ್ರದ ಕೆಲಸಗಳು ಆಗಬೇಕಿತ್ತು. ನಾನು ವಿಧಾನಸಭೆ ಅಧ್ಯಕ್ಷನಾಗಿ ಅವರ ಬಳಿ ಹೋಗುವುದಕ್ಕೆ ಆಗುವುದಿಲ್ಲ, ಹೀಗಾಗಿ ನಾನು ಕೇಳಿದ ಕಾರಣಕ್ಕೆ ಅವರೇ ಬಂದಿದ್ದರು. ಕ್ಷೇತ್ರದ ಕೆಲಸಗಳ ಹೊರತಾಗಿ ಬೇರೇನೂ ಚರ್ಚೆ ಮಾಡಿಲ್ಲ, ಅಧಿವೇಶನದ ದಿನಾಂಕ ನಿಗದಿ ಬಗ್ಗೆಯೂ ಚರ್ಚೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

**ಪತ್ರ ಸುಳ್ಳು:** ನಾನು ಮುಖ್ಯಮಂತ್ರಿಗಳಿಗಾಗಲಿ ಅಥವಾ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗಾಗಲಿ ಯಾವುದೇ ಪತ್ರ ಬರೆದಿಲ್ಲ. ಪತ್ರ ಬರೆದಿದ್ದೇನೆ ಎನ್ನುವುದು ಶುದ್ಧ ಸುಳ್ಳು. ನಾಲ್ಕು ದಿನಗಳ ಹಿಂದೆಯಷ್ಟೇ ನಾನು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದೇನೆ ಎಂದು ಹೇಳಿದರು.